ಶ್ರೀ ವಿ. ಎಲ್. ಪಾಟೀಲ್.—೧೫ ಕೋಟಿ ರೂಪಾಯಿಗಳ ಲೆಕ್ಕಪತ್ರವನ್ನು ನಾವು ಕೇಂದ್ರಕ್ಕೆ ಕೊಟ್ಟಿದ್ದೇವೆ. ನಾವು ಅವರಿಗೆ ೭೮ ಕೋಟಿ ರೂಪಾಯಿಗಳನ್ನು ಬೇಡಿದ್ದು, ಆದರ ಲೆಕ್ಕವನ್ನೂ ಅವರಿಗೆ ತಿಳಿಸಿದ್ದೇವೆ.

ಗ್ರಾಮಂತಾಣದ ನಿವೇಶನಗಳು

೭೭. ಶ್ರೀ ಬಿ. ಹೆಚ್. ಯುಂಕಾನಾಯ್ಕ (ಹರಪನಹಳ್ಳಿ)*.—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಬಣಕಾರ (ಲಂಬಾಣಿ) ಗ್ರಾಮಗಳು ಇವೆ.

ಆ) ಎಷ್ಟು ಗ್ರಾಮಗಳು (ಲಂಬಾಣಿ ತಾಂಡಗಳು) ಸರಕಾರಿ ಗ್ರಾಮ ತಾಣಗಳಲ್ಲಿ ನಿರ್ಮಾಣ ವಾಗಿವೆ.

ಇ) ಸರಕಾರಿ ಗ್ರಾಮತಾಣಗಳಲ್ಲಿ ಇಲ್ಲದೆ ಇದ್ದರೆ ಇವುಗಳನ್ನು ಪರಿವರ್ತನೆ ಮಾಡಿ ಗ್ರಾಮತಾಣ ಗಳಾಗಿ ಮಾಡಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ.

ಈ) ಹಾಗಿದ್ದಲ್ಲಿ ಇವುಗಳನ್ನು ಗ್ರಾಮತಾಣವಾಗಿ ಪರಿವರ್ತಿಸುವಲ್ಲಿ ಎಷ್ಟು ಸಮಯ ಬೇಕಾ ಗುತ್ತದೆ ?

ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ೧೫೮೦

ಆ) ಮಾಹಿತಿ ಸಧ್ಯಕ್ಕೆ ದೊರೆತಿಲ್ಲ. ಆದರೆ ಇದನ್ನು ದೊರಕಿಸಿಕೊಂಡ ಮೇಲೆ ಸಂಗ್ರಹಿಸಿ ಸದನದಲ್ಲಿ ಮಂಡಿಸಲಾಗುವುದು.

ಇ) ಯಾವುದೂ ಇಲ್ಲ.

ಈ) ಪ್ರಶ್ನೆ (ಇ) ಗೆ ಕೊಟ್ಟಿರುವ ಉತ್ತರದಿಂದ, ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆಯ ಅಳ್ನಾವರ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ.

೬೧ ಶ್ರೀ ಸಿ. ವಿ. ಪುಡಕಲಕಟ್ಟಿ (ಧಾರವಾಡ ಗ್ರಾಮಾಂತರ).—
ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಧಾರವಾಡ ತಾಲ್ಲೂಕಿನ ಅಳ್ನಾವರ ನಗರದ ಕುಡಿಯುವ ನೀರಿನ ಯೋಜನೆಯು ಸ್ಥಗಿತ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಈ ಕುಡಿಯುವ ನೀರಿನ ಯೋಜನೆಯನ್ನು ಎಷ್ಟು ದಿನಗಳಲ್ಲಿ ಸರ್ಕಾರವು ಕಾರ್ಯಗತ ಗೊಳಿಸುವುದು.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಸುಧಾರಿತ ಯೋಜನೆ ಇನ್ನೂ ತೆಗೆದುಕೊಂಡಿಲ್ಲ.

ಆ) ಈ ಯೋಜನೆಗೆ ತಗಲುವ ೨೩.೧೦ ಲಕ್ಷ ರೂ.ಗಳು ಸವಿವರ ರೇಖಾ ಅಂದಾಜು ಪಟ್ಟಿಯು ತಯಾರಾಗಿದ್ದು ಅದನ್ನು ಮಂಜೂರು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಗೆ ಆಡಳಿತ ಮಂಜೂರಾತಿ ನೀಡಿದೆ ನಂತರ ಹಾಗೂ ಇದಕ್ಕೆ ಬೇಕಾಗುವ ಹಣ ದೊರೆತ ನಂತರ ಕೆಲಸ ಪ್ರಾರಂಭಿಸಲಾಗುತ್ತದೆ.

---

*ಮಾನ್ಯ ಸದ್ಯರು ಹಾಜರಿರಲಿಲ್ಲ.

ಶ್ರೀ ಪಿ.ವಿ. ಪುದುಕಲಕಟ್ಟಿ.—ಆಳ್ವಾವರ ನಗರದ ಮುನಿಸಿಪಾಲಿಟಿಯವರು ಕುಡಿಯುವ ನೀರಿನ ಯೋಜನೆಯ ಬಗ್ಗೆ ತಮ್ಮ ಅಂತಿಗೆಯನ್ನು ಕೊಟ್ಟಿದ್ದಾರೆ. ಆದರೂ ಸಹ ಈ ಯೋಜನೆಯನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸರ್ಕಾರದವರು ತಕ್ಷಣ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಚಿಂದ್ರಶೇಖರ್.—ಇದಕ್ಕೆ ಸಂಬಂಧಪಟ್ಟ ಹಾಗೆ ಎಸ್ಟಿಮೇಟ್ ಈಗಾಗಲೇ ರೆಡಿಯಾಗಿದೆ ಇದಕ್ಕೆ ಆಡಳಿತದ ಮಂಜೂರಾತಿ ಹಣದ ವ್ಯವಸ್ಥೆಯನ್ನು ಮಾಡುವ ಸಲುವಾಗಿ ಸರ್ಕಾರದ ಪರಿಶೀಲನೆಯಲ್ಲಿದೆ. ಈ ವ್ಯವಸ್ಥೆಯಾದಮೇಲೆ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬರಗಾಲದಿಂದಾಗಿ ಪರಿಹಾರ ಕಾಮಗಾರಿಗಳು

೫೯ ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ್).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಶಾಶ್ವತವಾಗಿ ಬರಗಾಲಕ್ಕೆ ತುತ್ತಾಗಿರುವ ಪ್ರದೇಶಗಳನ್ನು ಗುರುತಿಸಲಾಗಿದೆಯೇ ?

ಆ) ಹಾಗಿದ್ದರೆ ಆ ಪ್ರದೇಶಗಳಾವುವು ;

ಇ) ಅವುಗಳ ಅಭಿವೃದ್ಧಿಗಾಗಿ ಸರಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಸಚಿವರು) —

ಅ) ಸರ್ಕಾರವು ಪ್ರಸ್ತುತ ಸಾಲಿನಲ್ಲಿ ರಾಜ್ಯದ ೧೬ ಜಿಲ್ಲೆಗಳಲ್ಲಿನ ಪ್ರದೇಶಗಳನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಗುರುತಿಸಲಾಗಿದೆ. ಯಾವುದೇ ಪ್ರದೇಶವನ್ನು ಶಾಶ್ವತ ಬರಗಾಲಕ್ಕೆ ತುತ್ತಾದ ಪ್ರದೇಶವೆಂದು ಹೇಳಲಾಗುವುದಿಲ್ಲ. ಆದರೆ ಕೆಲವು ಪ್ರದೇಶಗಳನ್ನು ಬರಗಾಲಕ್ಕೆ ಒಳಪಡಬಹುದಾದಂತ ಪ್ರದೇಶವೆಂದು ಗುರುತಿಸಲಾಗಿದೆ.

ಆ) ಹಾಗೆ ''ಬರಗಾಲಕ್ಕೆ ಒಳಪಡಬಹುದಾದಂತಹ ಪ್ರದೇಶ''ಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ರಾಜ್ಯದ ಅಭಾವ ಪ್ರದೇಶಗಳನ್ನು ಅಧ್ಯಯನ ಮಾಡಿ ದೀರ್ಘಾವಧಿ ಕ್ರಮಗಳನ್ನು ತೆಗೆದುಕೊಳ್ಳಲು ಶಿಫಾರಸ್ಸು ಮಾಡಲು ಸರ್ಕಾರವು ಅವರ ಮುಖ್ಯ ಕಾರ್ಯದರ್ಶಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದೆ. ಸಮಿತಿಯು ಕಾರ್ಯಕಲಾಪಗಳು ಮುಂದುವರೆದಿದೆ. ಭಾರಿ ಪ್ರಮಾಣದಲ್ಲಿ ಬರಗಾಲಕ್ಕೊಳಗಾದ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಸ್ತುತ ಸಾಲಿನಲ್ಲಿ ಬರಗಾಲ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಿರುತ್ತೆ.

ರಾಜ್ಯದ ಕ್ಷಾಮ ಪೀಡಿತ ಪ್ರದೇಶಗಳು
(ಕೇಂದ್ರ ಪಲಯ)

ಕ್ರಮ ಸಂಖ್ಯೆ	ಜಿಲ್ಲೆ		ತಾಲ್ಲೂಕು
೧.	ಬಿಜಾಪುರ	...	೧ ಬಾದಾಮಿ ೨ ಬಾಗಲಕೋಟೆ ೩ ಬಾಗೇವಾಡಿ ೪ ಬಿಜಾಪುರ ೫ ಬಿಳಗಿ ೬ ಹುನಗುಂದ ೭ ಮುದ್ದೇಬಿಹಾಳ್